# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 656(844) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಕೆ. ಅಬ್ದುಲ್ ಜಬ್ಬಾರ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : | ಮಾನ್ಯ ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 26.12.2022 |

| ಕ್ರಮ. ಸಂಖ್ಯೆ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ನೇಮಕಾತಿಗೆ ಇರುವ ಮಾನದಂಡ ಮತ್ತು ಮಾರ್ಗಸೂಚಿಗಳೇನು; | ರಾಜ್ಯದ ವಿಶ್ವವಿದ್ಯಾಲಗಳಲ್ಲಿ ಬೋಧಕ ಹುದ್ದೆಗಳ ನೇಮಕಾತಿಗೆ ವಿಶ್ವವಿದ್ಯಾಲಯ ಧನಸಹಾಯ ಆಯೋಗ ಕಾಲಕಾಲಕ್ಕೆ ನಿಗಧಿಪಡಿಸುವ ವಿದ್ಯಾರ್ಹತೆ/ಇತರೆ ಶೈಕ್ಷಣಿಕ ಮಾನದಂಡಗಳನ್ನು ಮತ್ತು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 57ರನ್ವಯ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಅಸ್ತಿತ್ವದಲ್ಲಿರುವ ಪರಿನಿಯಮ ಹಾಗೂ ಸರ್ಕಾರವು ತತ್ಸಂಭಂದಿತವಾಗಿ ಹೊರಡಿಸಿರುವ ಆದೇಶಗಳನ್ನು ಅನುಸರಿಸಿ ನೇಮಕ ಮಾಡಿಕೊಳ್ಳಲಾಗುತ್ತದೆ.<br><br>ಬೋಧಕೇತರ ಹುದ್ದೆಗಳನ್ನು ವಿಶ್ವವಿದ್ಯಾಲಯದ ವೃಂದ ಮತ್ತು ನೇಮಕಾತಿ ನಿಯಮಗಳು ಹಾಗೂ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಗಧಿಪಡಿಸುವ ಮೀಸಲಾತಿ ನಿಯಮಗಳು/ಇತರೆ ಆದೇಶಗಳನ್ನು ಅನುಸರಿಸಿ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. |
| (ಆ) | ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಅಕ್ರಮ/ಅನಧಿಕೃತವಾಗಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಅಂತಹ ವಿಶ್ವವಿದ್ಯಾಲಯಗಳ ವಿರುದ್ಧ ತೆಗೆದುಕೊಂಡಿರುವ ಕ್ರಮಗಳೇನು; (ವಿಶ್ವವಿದ್ಯಾಲಯವಾರು ಮಾಹಿತಿ ಒದಗಿಸುವುದು) | ಬಂದಿರುತ್ತದೆ.<br><br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಕನ್ನಡ ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ, ಕುವೆಂಪು ವಿಶ್ವವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಗುಲ್ಬರ್ಗ ವಿಶ್ವವಿದ್ಯಾಲಯಗಳಲ್ಲಿ ನಿಯಮಬಾಹಿರ ಪರಿನಿಯಮಗಳನ್ನು ರಚಿಸಿಕೊಂಡು ಅಕ್ರಮ/ಅನಧಿಕೃತವಾಗಿ ಬೋಧಕ/ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಮಾಡಲಾಗಿರುತ್ತದೆ.<br><br>ಈ ನಿಯಮಬಾಹಿರ ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗಿಯಾಗಿರುವ ಅಧಿಕಾರಿ/ನೌಕರರ ವಿರುದ್ಧ ಸಂದರ್ಭಾನುಸಾರ ಕೆ.ಸಿ.ಎಸ್.ಆರ್. ನಿಯಮ 214ರನ್ವಯ/ ಕೆ.ಸಿ.ಎಸ್ (ಸಿ.ಸಿ.ಎ) ನಿಯಮ/ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000 ಗಳನ್ವಯ ಇಲಾಖಾ ವಿಚಾರಣೆಯನ್ನು ನಿರ್ದಿಷ್ಟ ಕಾಲಮಿತಿಯಲ್ಲಿ ಹೂಡಲು ಕ್ರಮವಹಿಸಲಾಗುತ್ತದೆ. |

ಅಲ್ಲದೆ ಇಂತಹ ಪ್ರಕರಣಗಳು ಇನ್ನು ಮುಂದೆ ಪುನರಾವರ್ತಿಸದಂತೆ, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಗೊಳಪಡುವ ವಿಶ್ವವಿದ್ಯಾಲಯಗಳು ಸರ್ಕಾರದ ಆದೇಶ/ಸುತ್ತೋಲೆ/ಪ್ರಚಲಿತ ನಿಯಮಗಳು/ ಯುಜಿಸಿಯ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳದೇ, ನಿಯಮಾನುಸಾರ ಸರ್ಕಾರದ ಅನುಮತಿ ಪಡೆದು ಹುದ್ದೆಗಳನ್ನು ಸೃಜನೆ ಮಾಡದೇ ಹಾಗೂ ಪರಿನಿಯಮಾವಳಿಯನ್ನು ರಚಿಸಿಕೊಳ್ಳದೇ ಹುದ್ದೆಗಳ ಸೃಜನೆ, ಬೋಧಕ/ಬೋಧಕೇತರ ನೌಕರರ ನೇಮಕಾತಿ, ಪದೋನ್ನತಿ, ಹುದ್ದೆಗಳ ಉನ್ನತೀಕರಣ, ಹಾಗೂ ಹೆಚ್ಚು ಬಡ್ತಿಗಳನ್ನು ನೀಡಿ, ಸರ್ಕಾರ ಹಾಗೂ ವಿಶ್ವವಿದ್ಯಾಲಯಕ್ಕೆ ಆರ್ಥಿಕ ನಷ್ಟವನ್ನು ಉಂಟು ಮಾಡಿದ್ದಲ್ಲಿ ಅಂತಹ ಕ್ರಮಗಳನ್ನು ತೆಗೆದುಕೊಂಡವರ ವಿರುದ್ಧ ಶಿಸ್ತು ಕ್ರಮಜರುಗಿಸಲಾಗುವುದು. ಅಲ್ಲದೇ ಉಂಟಾಗುವ ಆರ್ಥಿಕ ನಷ್ಟವನ್ನು ಅವರಿಂದಲೇ ವಸೂಲಿ ಮಾಡಲಾಗುವುದು. ಇಂತಹ ನಿಯಮಬಾಹಿರ ನೇಮಕಾತಿಗೆ/ಬಡ್ತಿಗಳಿಗೆ ಸರ್ಕಾರದಿಂದ ಅಥವಾ ವಿಶ್ವವಿದ್ಯಾಲಯದ ಯಾವುದೇ ಸಹಾಯಾನುದಾನವನ್ನು ಒದಗಿಸಲಾಗುವುದಿಲ್ಲವೆಂದು ಈ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ ಕುಲಪತಿ, ಕುಲಸಚಿವರು ಹಾಗೂ ಹಣಕಾಸು ಅಧಿಕಾರಿ ಹಾಗು ಸಂಬಂಧಿಸಿದ ಅಧಿಕಾರ/ನೌಕರರನ್ನು ಹೊಣೆಗಾರರನ್ನಾಗಿಸಿ, ಯಾವುದೇ ಮುನ್ಸೂಚನೆ ನೀಡದೇ ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಕ್ಕೆ ಶಿಸ್ತು ಕ್ರಮ ಜರುಗಿಸಲು ಶಿಫಾರಸ್ಸು ಮಾಡಲಾಗುವುದು ಎಂದು ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 54 ಯುಎಸ್‌ವಿ 2022, ದಿನಾಂಕ: 12.09.2022ರಲ್ಲಿ ವಿಶ್ವವಿದ್ಯಾಲಯಗಳಿಗೆ ಕಟ್ಟುನಿಟ್ಟಿನ ಸೂಚನೆಯನ್ನು ನೀಡಲಾಗಿರುತ್ತದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ 2000ರ ಪ್ರಕರಣ 29(3)ರಲ್ಲಿ "(2)ನೇ ಉಪ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ನೌಕರರ ವೇತನ ಶ್ರೇಣಿಗಳನ್ನು ಪರಿಷ್ಕರಿಸುವ ಅಥವಾ ಅವರಿಗೆ ಯಾವುದೇ ಭತ್ಯೆಗಳನ್ನು ಅಥವಾ ಉಪಲಬ್ಧಿಗಳನ್ನು ನೀಡುವ ಅಧಿಕಾರವನ್ನು ಸಿಂಡಿಕೇಟ್‌ಗೆ ಪ್ರಧಾನ ಮಾಡಿರುವುದಾಗಿ ಭಾವಿಸತಕ್ಕದ್ದಲ್ಲ." ಎಂದು ನಿಯಮಿಸಲಾಗಿದೆ.

ಮುಂದುವರೆದು, ಬೋಧಕ ಹಾಗೂ ತತ್ಸಮಾನ ವೃಂದದ ಹುದ್ದೆಗಳ ನೇರ ನೇಮಕಾತಿ, ವೃತ್ತಿ ಪ್ರಗತಿ ಯೋಜನೆಯಡಿ ಬೋಧಕರ ಪದೋನ್ನತಿ ಹಾಗೂ ಇತರೇ ಸೇವಾ ವಿಷಯಗಳ ಕುರಿತಂತೆ, ಎಲ್ಲಾ ವಿಶ್ವವಿದ್ಯಾಲಯಗಳಿಗೆ ಸಾಮಾನ್ಯವಾಗಿ ಅನ್ವಯಿಸುವ ಏಕರೂಪದ ಪರಿನಿಯಮಗಳನ್ನು ರಚಿಸಲು ಕ್ರಮವಹಿಸಲಾಗಿದೆ.

| | | |
|---|---|---|
| (ಇ) | ಕಳೆದ ಮೂರು ವರ್ಷಗಳಿಂದ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಸಮರ್ಪಕ ಆರ್ಥಿಕ ನಿರ್ವಹಣೆ, ದಾಖಲೆ ತಿರುಚುವಿಕೆ ಮತ್ತು ಸಂಶಯಾಸ್ಪದ ದುರುಪಯೋಗದಿಂದ ಆದಾಯದಲ್ಲಿ ನಷ್ಟ ಉಂಟಾಗಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ನಷ್ಟದ ಮೊತ್ತವೆಷ್ಟು; ಇದಕ್ಕೆ ಜಬಾದ್ದಾರರಾದ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ತೆಗೆದುಕೊಂಡ ಕ್ರಮಗಳೇನು; | 1. ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್ ಮೆಂಟ್ ಸ್ಟಡೀಸ್ ನಲ್ಲಿ ಪ್ರವೇಶಾತಿ ಶುಲ್ಕಗಳನ್ನು ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ.<br>ಬೆಂಗಳೂರು ವಿಶ್ವವಿದ್ಯಾಲಯದ ಕೆನರಾ ಬ್ಯಾಂಕ್ ಸ್ಕೂಲ್ ಆಫ್ ಮ್ಯಾನೇಜ್ ಮೆಂಟ್ ಸ್ಟಡೀಸ್ ಇಲ್ಲಿ 2014-15ನೇ ಸಾಲಿನಿಂದ 2018-19ನೇ ಸಾಲಿನ ವರೆಗೆ ಎಂ.ಬಿ.ಎ ಕೋರ್ಸುಗೆ ದಾಖಲುಗೊಂಡ ವಿದ್ಯಾರ್ಥಿಗಳಿಂದ ಪಾವತಿಸಲಾದ ಒಟ್ಟು ರೂ. 23,30,610-00 ಗಳ ಪ್ರವೇಶ ಶುಲ್ಕದ ಪೈಕಿ ಕೇವಲ ರೂ. 4,24,930-00 ಗಳನ್ನು ಮಾತ್ರ ಅಂದಿನ ನಿರ್ದೇಶಕರಾದ ಡಾ. ಕೆ.ಜನಾರ್ಧನಂ ಇವರಿಂದ ಪಾವತಿಸಲಾಗಿದ್ದು, ಉಳಿಕೆ ಹಣ ರು. 18,69,650-00ಗಳ ಕುರಿತಂತೆ ಯಾವುದೇ ಕುರುಹು ಅಥವಾ ಸುಳಿವು ಲಭ್ಯವಿರದ ಕಾರಣ, ಉಳಿಕೆ ಹಣ ರೂ. 18,69,650-00ಗಳನ್ನು ವಿಶ್ವವಿದ್ಯಾಲಯದ ನಿಧಿಗೆ ಜಮೆ ಮಾಡಲು ಹಲವಾರು ನೋಟೀಸ್‌ಗಳ ಮೂಲಕ ಕೆ.ಜನಾರ್ಧನಂರವರಿಗೆ ಜಾರಿ ಮಾಡಲಾಗಿದ್ದು, ಸದರಿಯವರು ದಿನಾಂಕ: 31.12.2021ರಂದು ವಯೋನಿವೃತ್ತಿ ಹೊಂದಿರುತ್ತಾರೆ.<br><br>ವಿಶ್ವವಿದ್ಯಾಲಯದ ನೋಟಿಸ್ ಗಳಿಗೆ ಡಾ. ಕೆ.ಜನಾರ್ಧನಂ ಇವರು ಮಾನ್ಯ ಉಚ್ಚ ನ್ಯಾಯಾಲಯದಿಂದ ಮಧ್ಯಂತರ ತಡೆಯಾಜ್ಞೆ ಪಡೆದಿರುತ್ತಾರೆ. ಈ ಪ್ರಕರಣದಲ್ಲಿ ಬೆಂಗಳೂರು ವಿಶ್ವವಿದ್ಯಾಲಯವು ಜ್ಞಾನಭಾರತಿ ಪೋಲೀಸ್ ಠಾಣೆಯಲ್ಲಿ ದಿನಾಂಕ: 08.07.2022ರಂದು ದೂರು ದಾಖಲಿಸಿದ್ದು, ಅಪರಾಧ ಸಂಖ್ಯೆ : 0194/2022ರಡಿಯಲ್ಲಿ ದಿನಾಂಕ: 12.07.2022ರಂದು ಪ್ರಥಮ ವರ್ತಮಾನ ವರದಿ ಸಲ್ಲಿಸಲಾಗಿದೆ. ಮುಂದುವರೆದು, ಡಾ. ಕೆ.ಜನಾರ್ಧನಂ ಇವರ ಅಂತಿಮ ಪಿಂಚಣಿಯನ್ನು ವಿಶ್ವವಿದ್ಯಾಲಯದಿಂದ ತಡೆಹಿಡಿಯಲಾಗಿದೆ.<br><br>2. ದಾಖಲೆಗಳ ತಿರುಚುವಿಕೆ ಮತ್ತು ಸಂಶಯಾಸ್ಪದ ಹಣದ ದುರುಪಯೋಗ.<br><br>ಶ್ರೀ ಕೆ.ವಿ. ಶಿವಾರೆಡ್ಡಿ, ಹಿರಿಯ ಸಹಾಯಕರು, ಇವರು ಬೆಂಗಳೂರು ವಿಶ್ವವಿದ್ಯಾಲಯದ ಹಣಕಾಸು ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ ದಾಖಲೆಗಳ ತಿರುಚುವಿಕೆ ಮತ್ತು ಸಂಶಯಾಸ್ಪದ ದುರುಪಯೋಗದಿಂದ ಪ.ಜಾ/ಪ.ಪಂ ಸಂಶೋಧನಾ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನದ ಬಿಲ್ಲಿನಲ್ಲಿ ಒಟ್ಟು ರೂ. 5.30,026/-ಗಳ ಹಣವನ್ನು ದುರುಪಯೋಗ |

| | | |
|---|---|---|
| | | ಪಡಿಸಿಕೊಂಡಿದ್ದರು. ಈ ಕುರಿತಂತೆ ನಿವೃತ್ತ ನ್ಯಾಯಾಧೀಶರಿಂದ ಇಲಾಖಾ ವಿಚಾರಣೆ ನಡೆಸಿ ವಿಶ್ವವಿದ್ಯಾಲಯವು ಪಡೆದ ವಿಚಾರಣಾ ವರದಿಯಲ್ಲಿ ಹಣ ದುರುಪಯೋಗದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಅವರನ್ನು ಹಿರಿಯ ಸಹಾಯಕ ಹುದ್ದೆಯಿಂದ ಸಹಾಯಕ ಹುದ್ದೆಗೆ ಹಿಂಬಡ್ತಿಗೊಳಿಸಿ, ಅವರಿಂದ ಹಣ ದುರುಪಯೋಗದ ಮೊತ್ತ ರೂ. 5.30,026/-ಗಳಲ್ಲಿ ರೂ. 1,60,000/-ಗಳನ್ನು ವಸೂಲಾತಿ ಮಾಡಲಾಗಿದೆ. ಉಳಿದ ಮೊತ್ತ ರೂ. 3,70,025/-ಗಳನ್ನು ಪಿಂಚಣಿ ಹಣದಿಂದ ಮುರುಗಡೆ ಮಾಡಿ ತಾತ್ಕಾಲಿಕ ಪಿಂಚಣಿಯನ್ನು ಬಿಡುಗಡೆ ಮಾಡಲು ವಿಶ್ವವಿದ್ಯಾಲಯದಿಂದ ಕ್ರಮ ವಹಿಸಲಾಗುತ್ತಿದೆ. |
| (ಈ) | ಸರ್ಕಾರದ ಮಾರ್ಗಸೂಚಿಗಳನ್ವಯ ಬೆಂಗಳೂರು ವಿಶ್ವವಿದ್ಯಾಲಯವು ನಿಖರವಾಗಿ ಹೊಂದಿರುವ ಬ್ಯಾಂಕ್ ಖಾತೆಗಳ ಸಂಖ್ಯೆ ಎಷ್ಟು? | ಬೆಂಗಳೂರು ವಿಶ್ವವಿದ್ಯಾಲಯವು ಒಟ್ಟು 44 ಬ್ಯಾಂಕ್ ಖಾತೆಗಳನ್ನು ಹೊಂದಿದ್ದು, ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್ ಡಿ 5 ಟಿಎಆರ್ 2014, ದಿನಾಂಕ: 30.01.2017ರಲ್ಲಿ ಗೊತ್ತುಪಡಿಸಲಾಗಿರುವ ಮಾರ್ಗಸೂಚಿಗಳನ್ನು ಅನುಸರಿಸಿ, ಎಲ್ಲಾ ಬ್ಯಾಂಕ್ ಖಾತೆಗಳನ್ನು ಪ್ರಸ್ತುತ Sweep-in-Sweep-out ಖಾತೆಗಳನ್ನಾಗಿ ಪರಿವರ್ತಿಸಲಾಗಿದೆ. |

**ಸಂಖ್ಯೆ: ಇಡಿ/560 /ಯುಬಿವಿ /2022**

**(ಡಾ|| ಅಶ್ವತ್ ನಾರಾಯಣ ಸಿ.ಎನ್.)**

ಉನ್ನತ ಶಿಕ್ಷಣ, ಐಟಿ – ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಜೀವನೋಪಾಯ ಹಾಗೂ ಉದ್ಯಮಶೀಲತೆ ಸಚಿವರು.